ಬಿಡುವುದಿಲ್ಲ. ಯಾವುದೇ ಕಾರಣಕ್ಕೂ ಅನ್ಯಾಯ ಆಗುವುದಕ್ಕೆ ಬಿಡುವುದಿಲ್ಲ. ಇದರಲ್ಲಿ ಮೋಸ ಎಂದು ನೀವು ಮಾತ್ರ ಹೇಳುತ್ತಿರುವುದು. ನೀವು ಜನರಿಗೆ ಈ ರೀತಿ ಹೇಳಿದರೆ ಜನರು ನಿಮ್ಮ ಮಾತನ್ನು ಕೇಳಬೇಕಲ್ಲ?

ಶ್ರೀ ಸಿ. ಭೈರೇಗೌಡ : ಏನು ಇವರುಗಳೇ ಕರ್ನಾಟಕ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಇರತಕ್ಕಂಥದ್ದು, ಇನ್ನು ಯಾರೂ ಇಲ್ಲ ಇಲ್ಲಿ ಅಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಇದು ಎಕ್ಸ್‌ಪರ್ಟ್ಸ್ ಕಮಿಟಿ ಅಲ್ಲ, ಪೊಲಿಟಿಕಲ್ ಕಮಿಟಿ, ಅಂದರೆ ಯು.ಡಿ.ಎಫ್. ಎಕ್ಸ್‌ಪರ್ಟ್ಸ್ ಪ್ರೊಟೆಕ್ಷನ್ ಕಮಿಟಿ. ಆ ಕಾರಣಕ್ಕಾಗಿ ನಾವೂ ಕೂಡ ಧರಣಿಯನ್ನು ಮಾಡುತ್ತೇವೆ.

(ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರಾದಿಯಾಗಿ ಕಾಂಗ್ರೆಸ್ ಸದಸ್ಯರೆಲ್ಲರೂ ಸದನದ ಬಾವಿಯಲ್ಲಿ ಧರಣಿ ಕುಳಿತುಕೊಂಡರು)

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ನೀವು ಮಾಡಿರುವಂಥ ಸಮಿತಿಯನ್ನು ನಾವು ಬಹಿಷ್ಕರಿಸಬೇಕಾಗಿದೆ. ನೀವು ಕರ್ನಾಟಕದ ಜನತೆಯನ್ನು ಮತ್ತು ರಾಜ್ಯದ ಹಿತಾಸಕ್ತಿಯನ್ನು ಬಲಿ ಕೊಡುತ್ತಿದ್ದೀರಿ. ಕರ್ನಾಟಕ ರಾಜ್ಯದ ಹಿತಾಸಕ್ತಿಯನ್ನು ಮಾರಿಕೊಳ್ಳುತ್ತಿದ್ದೀರಿ ಆದಕ್ಕಾಗಿ ನಾವೂ ಕೂಡ ಇದನ್ನು ಪ್ರತಿಭಟಿಸಿ ಧರಣಿಯನ್ನು ಮಾಡುತ್ತೇವೆ.

(ಮಾನ್ಯ ಸಭಾಪತಿಯವರು ಸದನದ ಬಾವಿಗೆ ಬಂದು ಧರಣಿ ಕುಳಿತರು)

ಶ್ರೀ ಸಿದ್ಧರಾಮಯ್ಯ : ಈ ರೀತಿ ಮಾಡಿಬಿಟ್ಟರೆ ನಿಮ್ಮ ಬೇಳಿಕಾಳು ಏನೂ ಬೇಯುವುದಿಲ್ಲ. ಈ ರಾಜ್ಯದ ಜನತೆಗೆ ರಾಜ್ಯದ ಹಿತವನ್ನು ಯಾರು ಹೇಗೆ ಕಾಪಾಡುತ್ತಾರೆ ಎನ್ನುವ ವಿಷಯ ಗೊತ್ತಿದೆ. ನೀವು ಬೇಕಾದರೆ ಹೋಗಿ, ಹೇಳೋಗಿ, ಈ ರೀತಿಯಲ್ಲಿ ಸದನದ ಕಲಾಪ ನಡೆಯದ ಹಾಗೆ ನೀವು ಮಾಡಬಾರದು. ನಾನು ಈಗಾಗಲೇ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ, ನಾಳೆ ಮಾನ್ಯ ಮುಖ್ಯಮಂತ್ರಿಗಳು ಬಂದು ಇದರ ಬಗ್ಗೆ ಹೇಳಿಕೆಯನ್ನು ಕೊಡುತ್ತಾರೆಂದೂ ಹೇಳಿದ್ದೇನೆ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಇದೇ ವಿಷಯದ ಬಗ್ಗೆ ನಾನು ಹೇಳುವುದೇನೆಂದರೆ ಇವೊತ್ತು ಬೆಳಿಗ್ಗೆ ಆ ಭಾಗದಿಂದ ಬಂದಂಥ ಜನರು ಹೈಕೋರ್ಟ್‌ನಲ್ಲಿ ರಿಟ್ ಹಾಕಿದ್ದಾರೆ. ಇವೊತ್ತು ರೈತರಿಗೆ ನೀರನ್ನು ಬಿಡುವುದಿಲ್ಲವೆಂದು ಆರ್ಡರ್ ಮಾಡಿದ್ದಾರೆ. ಆಂಧ್ರಪ್ರದೇಶಕ್ಕೆ ನೀರು ಬಿಡುತ್ತೇವೆ ಎಂದು ಹೇಳಿ ನೀರನ್ನು ಕೊಟ್ಟಿಲ್ಲ. ಇದರ ಬಗ್ಗೆ ಕೋರ್ಟ್‌ನಲ್ಲಿ ಈಗಾಗಲೇ ನೋಟಿಸ್ ಇಶ್ಯೂ ಮಾಡಿ ಆರ್ಡರ್ ಮಾಡಿದ್ದಾರೆ. 1992ನೇ ಇಸವಿಯಿಂದ 1998ನೇ ಇಸವಿಯವರೆಗೆ ನೀರು ಬಿಡುತ್ತೇವೆ ಎಂದು ಹೇಳಿ ನೋಟಿಸ್ ಕೊಟ್ಟು ರೈತರಿಗೆ ಆದೇಶ ಕೊಟ್ಟನಂತರ ನಿಮ್ಮ ಅಧಿಕಾರಿಗಳು ಆಂಧ್ರಪ್ರದೇಶಕ್ಕೆ ನೀರು ಬಿಡಬೇಕು ಎಂದು ಹೇಳಿ ಇವೊತ್ತು ನೀರು ಬಿಡುವುದನ್ನು ನಿಲ್ಲಿಸಿದ್ದಾರೆ. ರೈತರಿಗೆ ನೀರನ್ನು ಕೊಡುತ್ತಿಲ್ಲ. ಇದರ ಬಗ್ಗೆ ಈಗಾಗಲೇ ಹೈಕೋರ್ಟ್‌ನಲ್ಲಿ ರಿಟ್ ಹಾಕಿದ್ದಾರೆ.